ದಿನಾಂಕ 07.04.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 9ನೇ ಪ್ರತಿವಾದಿ ಪರ ಶ್ರೀಮತಿ.ಬಿ.ವಿ.ಎ ವಕೀಲರಿಂದಃ

ವಾದಿ ಮತ್ತು ಪ್ರತಿವಾದಿಯವರು ಬೇರೆ ಬೇರೆ ಊರಿನಲ್ಲಿ ವಾಸವಿದ್ದಾರೆ ಎಂದು ತಿಳಿಸಿದ್ದು ಅದೇ ರೀತಿ ಬೇರೆ ಬೇರೆ ವ್ಯವಸಾಯವನ್ನು ಮಾಡುತ್ತಿದ್ದೀರಾ ಎಂದರೆ ಸಾಕ್ಷಿ ಎಲ್ಲಾ ಕಡೆ ಒಡಾಡಿಕೊಂಡು ಮಾಡುತ್ತಿದ್ದೇವು ಎಂದು ಹೇಳಿದ್ದಾರೆ. 3ನೇ ಪ್ರತಿವಾದಿ ಜಮೀನಿನಿಂದ ಬಂದ ಆದಾಯವನ್ನು ನಿಮಗೆ ಕೊಡುತ್ತಿದ್ದರಾ ಎಂದರೆ ಇಲ್ಲ. ದಾವಾ ಸ್ವತ್ತುಗಳು ಜಂಟಿ ಸ್ವಾಧೀನದಲ್ಲಿ ಇದ್ದವು ಎಂದು ತಿಳಿಸಿದ್ದು ದಾಖಲೆ ಕೊಟ್ಟಿದ್ದೀರಾ ಎಂದರೆ ಹೌದು. ಏನು ಕೊಟ್ಟಿದ್ದೀರಾ ಎಂದರೆ ಪಹಣಿ ಪತ್ರಿಕೆಗಳನ್ನು ಕೊಟ್ಟಿದ್ದೇನೆ. 3ನೇ ಪ್ರತಿವಾದಿಯ ಹೆಸರಿಗೆ ಸರ್ವೆ ನಂ.7, ಸರ್ವೇ ನಂ 8, ಸರ್ವೇ ನಂ 118/5, ಸರ್ವೇ ನಂ 279/2, ಸರ್ವೇ ನಂ 271/2 ಸ್ವತ್ತುಗಳು 1988-89 ರಲ್ಲಿ ಪೌತಿ ಖಾತೆಯಾಗಿದೆ ಎಂದರೆ ಗೊತ್ತಿಲ್ಲದ ಹಾಗೆ ಮಾಡಿಸಿಕೊಂಡಿದ್ದಾರೆ. ಅದನ್ನು ಪ್ರಶ್ನೆ ಮಾಡಲು ತೊಂದರೆ ಇತ್ತಾ ಎಂದರೆ ಇಲ್ಲ. ಸರ್ವೇ ನಂ 92/1 ದಿನಾಂಕ 09.11.2015 ರಲ್ಲಿ 3ನೇ ಪ್ರತಿವಾದಿಯ ಹೆಸರಿನಲ್ಲಿ ಪೌತಿ ಖಾತೆಯಾಗಿದೆ ಎಂದರೆ ಅದನ್ನು ಪ್ರಶ್ನೆಮಾಡಿದ್ದೀರಾ ಎಂದರೆ ಇಲ್ಲ.

2. ಸರ್ವೆ ನಂ. 23/4 ಪ್ರತಿವಾದಿ 6 ರಿಂದ 8 ರವರ ಹೆಸರಿಗೆ ಖಾತೆಯಾಗಿತ್ತು ಅದನ್ನು ಪ್ರಶ್ನೆ ಮಾಡಿದ್ದೀರಾ ಎಂದರೆ ಹೌದು. ನಮಗೆ ತಿಳಿಯದ ಹಾಗೆ ಖಾತೆ ಮಾಡಿಸಿಕೊಂಡಿದ್ದಾರೆ. ಸರ್ವೇ ನಂ 357 ಮತ್ತು 358 ಸಂತೆ ಮೊಗೇನಹಳ್ಳಿಯಲ್ಲಿದೆ. ನಾನು ಅದೇ ಊರಿನಲ್ಲಿ ಹುಟ್ಟಿದಾಗಿನಿಂದಲೂ ವಾಸವಿದ್ದೇನೆ. ಪ್ರತಿವಾದಿ 6 ರಿಂದ 8 ರವರು 9ನೇ ಪ್ರತಿವಾದಿಗೆ ಕ್ರಯ ಪತ್ರ ಬರೆದುಕೊಟ್ಟಿರುವುದು ನಿಮಗೆ ಗೊತ್ತಿತ್ತಾ ಎಂದರೆ ಇಲ್ಲ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ಆ ಫೋಟೊದಲ್ಲಿ ಕಾಣುವ ಸ್ಮಷಾಣದಲ್ಲಿ ಎಸ್.ಎಂ ಹಳ್ಳಿಯಲ್ಲಿ ಯಾರೇ ಸತ್ತರೂ ಅಲ್ಲೇ ಹೂಳುತ್ತಾರೆ ಎಂದರೆ ಹೌದು.

ಆ ಸ್ಮಶಾಣದ ಮುಂದೆ ಇರುವ ಜಾಗ ಸರ್ವೇ ನಂ 357 ಮತ್ತು 358 ಎಂದರೆ ಹೌದು. ಸಾಕ್ಷಿ ಇನ್ನೊಂದು ಫೋಟೋವನ್ನು ತೋರಿಸಿ ಫೋಟೋದಲ್ಲಿ ಕಾಣುವ ರಸ್ತೆ ಎಸ್.ಎಂ ಹಳ್ಳಿಯಿಂದ ಮಾಳ್ಗಾಳಿಗೆ ಹೋಗುವ ರಸ್ತೆ ಎಂದರೆ ಹೌದು. ಆ ರಸ್ತೆ ಹಿಂದೆ ಮಣ್ಣು ರಸ್ತೆ ಎಂದರೆ ಹೌದು. ಕಳೆದ 4 ವರ್ಷಗಳ ಹಿಂದೆ ಆ ರಸ್ತೆಗೆ ಟಾರನ್ನು ಹಾಕಿ bridge ಹಾಕಿದ್ದಾರೆ ಎಂದರೆ ಹೌದು. ನಮ್ಮ ಊರಿನಲ್ಲಿ ಒಂದು ಕುಂಟೆ ಜಾಗಕ್ಕೆ ಎಷ್ಟು ಬೆಲೆ ಎಂದರೆ ಗೊತ್ತಿಲ್ಲ. 6 ರಿಂದ 8ನೇ ಪ್ರತಿವಾದಿ 9ನೇ ಪ್ರತಿವಾದಿಗೆ ಎಷ್ಟು ಹಣಕ್ಕೆ ಕ್ರಯ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ನಿ.ಪಿ 20 ರಲ್ಲಿ ರೂ.1,90,000 ಗಳಿಗೆ ಬರೆದು ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಸರ್ವೇ ನಂ 357 ಮತ್ತು 358 ರಲ್ಲಿ 9ನೇ ಪ್ರತಿವಾದಿ ಗಂಡನ ಉತ್ತರಾದಿ ಕ್ರಿಯೆಗಳನ್ನು ಮಾಡಿದ್ದಾರೆ ಎಂದರೆ ಗೊತ್ತಿಲ್ಲ.

3. 9 ನೇ ಪ್ರತಿವಾದಿ 8 ಮತ್ತು 9ನೇ ಅನುಸೂಚಿ ಸ್ವತ್ತಿನಲ್ಲಿ ಬೋರನ್ನು ಹಾಕಿಸಿಕೊಂಡು ವ್ಯವಸಾಯವನ್ನು ಮಾಡುತ್ತಿದ್ದಾರೆ ಎಂದರೆ ಇಲ್ಲ. ದಾವಾ ಸ್ವತ್ತುಗಳ ಚಕ್ಕುಬಂದಿ ಏನು ಎಂದರೆ ಅಷ್ಟು ಜ್ಞಾಪಕ ಇಲ್ಲ. 8 ಮತ್ತು 9 ನೇ ಅನುಸೂಚಿ ಸ್ವತ್ತನ್ನು 6 ರಿಂದ 8 ನೇ ಪ್ರತಿವಾದಿಯವರು 9ನೇ ಪ್ರತಿವಾದಿಗೆ ಕ್ರಯ ಮಾಡಿಕೊಟ್ಟ ದಿನದಿಂದಲೂ 9ನೇ ಪ್ರತಿವಾದಿಯು ಸ್ವಾಧೀನದಲ್ಲಿದ್ದಾರೆ ಎಂದರೆ ಇಲ್ಲ. 8 ಮತ್ತು 9 ನೇ ಅನುಸೂಚಿ ಸ್ವತ್ತಲ್ಲಿ ಏನು ವ್ಯವಸಾಯ ಮಾಡುತ್ತಿದ್ದೀರಾ ಎಂದರೆ ರಾಗಿ, ಜೋಳ,ಹುರಳಿ ಬೆಳೆಯುತ್ತಿದ್ದೆನು. 9ನೇ ಪ್ರತಿವಾದಿ 2010ರಲ್ಲಿ ಗೋರಿ ಕಟ್ಟುವಾಗ ತಡೆಯಲು ಪ್ರಯತ್ನಿಸಿದ್ದೀರಾ ಎಂದರೆ ನನಗೆ ಗೊತ್ತಾಗಿರುವುದಿಲ್ಲ. 9ನೇ ಪ್ರತಿವಾದಿ ಖರೀದಿ ಮಾಡಿದ ದಿನದಿಂದಲೂ ಸಹ ರಾಗಿ, ಜೋಳ, ತರಕಾರಿಯನ್ನು ಬೆಳೆಯುತ್ತಿದ್ದಾರೆ ಎಂದರೆ ಇಲ್ಲ.

4. 1 ರಿಂದ 7 ನೇ ಅನುಸೂಚಿ ಸ್ವತ್ತಿನಲ್ಲಿ ಮಾತ್ರ ಹಕ್ಕು ಇದ್ದು, 8 ಮತ್ತು 9 ನೇ ಅನುಸೂಚಿ ಸ್ವತ್ತಲ್ಲಿ ಯಾವುದೇ ಹಕ್ಕಿಲ್ಲ ಎಂದರೆ ಇದೆ. 2 ಮತ್ತು 3ನೇ ವಾದಿಯವರು ಒಬ್ಬರು Factory ಗೆ ಹೋಗುತ್ತಾರೆ ಇನ್ನೊಬ್ಬರು ಡ್ರೈವರ್ ಕೆಲಸ ಮಾಡುತ್ತಾರೆ. ಪೌತಿ ಖಾತೆ ಮಾಡುವಾಗ ನಮ್ಮ ಗಮನಕ್ಕೆ ಇದ್ದರೂ ಸಹ 1 ರಿಂದ 3ನೇ ವಾದಿಯವರನ್ನು ಎತ್ತಿಕಟ್ಟಿ 9ನೇ ಪ್ರತಿವಾದಿಯ ಕಬ್ಬಳಿಸುವ

ಉದ್ದೇಶದಿಂದ ಸುಳ್ಳು ದಾಖಲೆ ಹಾಕಿದ್ದೇವೆ ಎಂದರೆ ಸರಿಯಲ್ಲ. ವಾದಿಯವರಿಗಾಗಲೀ 1 ರಿಂದ 7ನೇ ಪ್ರತಿವಾದಿಯವರಿಗಾಗಲೀ 8 ಮತ್ತು 9 ನೇ ಅನುಸೂಚಿ ಸ್ವತ್ತಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಿ.ಪಿ 1 ರಿಂದ 28 ನ್ನು ಈ ದಾವೆಗೋಸ್ಕರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

**(ಸಾ.ಓ.ಹೇ.ಕೇ.ಸ.ಇ.ಎ.ಒ)**